Regd No B G 155 ಸಂ (132) 19–10–1965

ಸತ್ಯವಾದಿ

49th Year
Satyavadi
DAILY
MYSORE 4

ಸ್ಥಾಪಕರು – ಅರಮನೆ ಸಿರಸ್ತೇದಾರ್ ಎಂ ಎ ಸುಬ್ಬರಾಯರು ಸಂಪಾದಕರು – ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ 2 ಪೈಸೆ

ಭೂ ಸುಧಾರಣೆ ಕಾನೂನು ಬಗ್ಗೆ ರಿಟ್ ಅಡ್ಮಿಟ್

1962 ರಲ್ಲಿ ಮಾಡಿದ ಭೂ ಸುಧಾರಣಾ ಶಾಸನ ಮತ್ತು 1965 ರಲ್ಲಿ ಅದಕ್ಕೆ ಮಾಡಿದ ತಿದ್ದುಪಡಿಗಳ ಕ್ರಮಬದ್ಧತೆಯನ್ನು ಮೈಸೂರು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು ಈ ಸಂಬಂಧಪಟ್ಟ ಹಾಗೆ ಶ್ರೀ ನಾಗಭೂಷಣಭಟ್ಟ ಮತ್ತು ಶ್ರೀ ಲಕ್ಷ್ಮೀನಾರಾಣಪ್ಪ ಎಂಬವರು ಸಲ್ಲಿಸಿದ್ದ ರಿಟ್ ಅರ್ಜಿ ನಿನ್ನೆ ಶ್ರೇಷ್ಠ ನ್ಯಾಯಾಲಯದಲ್ಲಿ ಅಡ್ಮಿಟ್ ಆಯಿತು.

★

ಆರ್ಕಿಮಿಡೀಸಿನ ಗೋರಿ

ಸಿಸಿಲಿಯ ಸಿರಾಕ್ಯೂಸಿನಿಂದ ಬಂದಿರುವ ವಾರ್ತೆ ಆರ್ಕಿಮಿಡೀಸಿನ ಗೋರಿ ಎಂದು ಇದುವರೆಗೆ ಗ್ರೀಕಿನ ಹೊರಗಡೆ ಇದ್ದ ಒಂದು ಸ್ಥಳವನ್ನು ತೋರಿಸಲಾಗುತ್ತಿತ್ತು ಈಗ ನಿಜವಾದ ಗೋರಿ ಶೋಧಿಸುವದಾಗಿ ಭೂಗರ್ಭ ಶೋಧಕರು ತಿಳಿಸಿದ್ದಾರೆ ಹೋಟೆಲು ಒಂದಕ್ಕಾಗಿ ಭೂಮಿ ಅಗೆಯುತ್ತಿದ್ದಾಗ ಎರಡು ಬಂಡೆಗಳ ನಡುವೆ ಒಂದು ಅಮೃತ ಶಿಲೆಯ ಗೋರಿ ದೊರೆತಿದೆ ಎಂದು, ಸೀಸದ ಶವದ ಪೆಟ್ಟಿಗೆ ಇದ್ದು ಅದಕ್ಕೆ ರತ್ನದಿಂದ ಕೂಡಿದ ಚಿನ್ನ ಇಡಲಾಗಿದೆ ಎಂಬುದಾಗಿ ವರದಿಯಾಗಿದೆ

★

ಗೋವಾದಲ್ಲಿ

ಗೋವಾದಲ್ಲಿ ವಿಲೀನ ವಿರೋಧದ ಮಂಡಲಿ ರಚಿತವಾಗಿದೆ

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸ. ಸಂವತ್ಸರ
ಆ ಬಹುಳವಾರ ಏಕಾದಶಿ ಮಖ

ಆರು ತಿಂಗಳ ದಾಸ್ತಾನು ಅಗತ್ಯ

ಬೆಂಗಳೂರಿನಲ್ಲಿ ಕಾನೂನು ಬದ್ಧ ಪಡಿತರ ಜಾರಿಗೆ ತರುವ ಮುನ್ನ ಆರು ತಿಂಗಳಿಗಾಗುವ ಆಹಾರ ದಾಸ್ತಾನು ಇರುವದೇ ಎಂಬುದು ಸರ್ಕಾರಕ್ಕೆ ಭರವಸೆ ಆಗಬೇಕು ಎಂದು ಆಹಾರ ಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ನಿನ್ನೆ ವಿಧಾನಸಭೆಯಲ್ಲಿ ತಿಳಿಸಿದರು ಈ ವಿಚಾರದಲ್ಲಿ ಭಾರತ ಸರ್ಕಾರದ ಭರವಸೆ ಕೇಳಲಾಗಿರುವದಾಗಿ ಅವರು ತಿಳಿಸಿದರು

✱

ತರಕಾರಿ ಬೆಳೆಗೆ

ತರಕಾರಿಗಳನ್ನು ಬೆಳೆಯಲು ಮಂಡ್ಯದಲ್ಲಿ ಸುಮಾರು ನಾನೂರೈವತ್ತು ಎಕರೆ ಭೂಮಿ ಮೀಸಲಿಡಲು ರಾಜ್ಯ ಸರ್ಕಾರ ನಿರ್ಧರಿಸಿದೆ

★

ಹಾಲು ಸರಬರಾಜಿಗೆ

ಬೆಂಗಳೂರಿಗೆ ಬೇಕಾದ ಹಾಲು ಸರಬರಾಜಿಗೆ ಅನೇಕಲ್ ಬಳಿಯ ಬೊಮ್ಮನ ಹಳ್ಳಿಯಲ್ಲಿ ಕಾಲನಿ ಸ್ಥಾಪಿಸಲಾಗುವುದು

●

ಒಂದೇ ಹೊತ್ತು ಊಟ

ಬೆಂಗಳೂರಿನ ಲಾಲ್ಬಾಗಿನಲ್ಲಿ ನಿನ್ನೆ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಮಾತನಾಡಿ ಮಧ್ಯಾಹ್ನ ಒಂದೇ ಹೊತ್ತು ತಾವು ಆಹಾರ ಸೇವನೆ ಮಾಡುವುದಾಗಿ ತಿಳಿಸಿದರು

ನೀರಾವರಿಗೆ

24 ನೇ ಇಸವಿಯಲ್ಲಿ ಆದ ಮೈಸೂರು–ಮದರಾಸು ಒಪ್ಪಂದದ ಪ್ರಕಾರ ಕಾವೇರಿಯ ಹದಿನೆಂಟು ಪ್ರಾಜೆಕ್ಟುಗಳನ್ನು ಮೂರು ಲಕ್ಷ ಎಕರೆಗಳ ವ್ಯವಸಾಯಕ್ಕೆ ಉಪಯೋಗಿಸಲಾಗುವದು

★

ಮುಂದಿನ ವರ್ಷ

ಯುಗೋಸ್ಲೋವಿಯಾ ಪ್ರಧಾನಿ ಪೀಟರ್ ಸ್ಟಾಂಬೊಲಿಕ್ ಮುಂದಿನ ವರ್ಷ ಮೊದಲಲ್ಲಿ ಭಾರತಕ್ಕೆ ಭೇಟಿಕೊಡುವರು

★

ನಂಬೂದರಿ ನುಡಿ

ಭಾರತ ಪಾಕಿಸ್ತಾನದ ಕಲಹ, ಭಾರತ ಚೀಣಾ ಕಲಹ ಇವು ಶಾಂತಿಯುತವಾಗಿ ಬಗೆ ಹರಿಯಬೇಕು ಎಂದು ಶ್ರೀ ಇ ಎಂ ಎಸ್ ನಂಬೂದರಿಪಾದರು ನಿನ್ನೆ ಮಧರಾದಲ್ಲಿ ಭಾಷಣಮಾಡುತ್ತಾ, ತಿಳಿಸಿದರು

✱

ಪುರಸಭೆ

ಮೈಸೂರು— ಪುರಸಭೆಯ ಸಾಧಾರಣ ಮುಂದುವರಿದ ಅಧಿವೇಶನವು ತಾ|| 22 ಶುಕ್ರವಾರ ನಡೆಯುವುದು.

✱

ಬೆಂಗಳೂರು— ಮೋಟಾರು ಸ್ಪಿರಿಟ್ ತೆರಿಗೆ ಹೆಚ್ಚಿಸುವ ಮಸೂದೆ ಶಾಸನಸಭೆಯಲ್ಲಿ ಮಂಡಿಸಲಾಯಿತು

★

ಅಶ್ರುವಾಯು ಪ್ರಯೋಗ

ಶ್ರೀನಗರ— ಹಜರತ್ ಮಸೀದಿಯಲ್ಲಿ ಹಜರತ್ ಅಬೂಬೇಕರು ಸಿದ್ದೀಕರ ಉರುಸು ಮೊನ್ನೆ ನಡೆದಾಗ ವಿದ್ಯಾರ್ಥಿಗಳು ಮೆರವಣಿಗೆ ನಡೆಸಿ ಮಸೀದಿಯ ಕಾವಲಿದ್ದ ಪೋಲೀಸರ ಮೇಲೆ ಕಲ್ಲು ಹೊಡೆಯಲು ಅಶ್ರುವಾಯು ಪ್ರಯೋಗಿಸಿ ಚದುರಿಸಲಾಯಿತು

ರಹಸ್ಯ ಒಪ್ಪಂದ

ನವದೆಹಲಿ— ಪೂರ್ವ ಪಾಕಿಸ್ಥಾನಕ್ಕೆ ಕಾಶ್ಮೀರದ ಮೇಲೆ ಆಶೆಯಿಲ್ಲವೆಂದೂ, ಪಶ್ಚಿಮ ಪಾಕಿಸ್ಥಾನಿಗಳ ರಾಜಕೀಯ ಭದ್ರತೆಗಾಗಿ ಕಾಶ್ಮೀರ ಸಮಸ್ಯೆಯನ್ನು ಅಯೂಬರು ಉಪಯೋಗಿಸುತ್ತಿರುವರೆಂದೂ ಪೂರ್ವ ಬಂಗಾಳ ಸ್ವತಂತ್ರ ಕ್ರಾಂತಿ ಸಮಿತಿ ಚಿಕ್ಕ ಹಸ್ತಕದಲ್ಲಿ ಪ್ರಕಟಿಸಿದೆ — ಪಾಕಿಸ್ಥಾನಿ ಸರ್ಕಾರವು ಚೀಣಾಕ್ಕೆ ರಹಸ್ಯ ಒಪ್ಪಂದವಾಗಿದ್ದು ಅಯೂಬರು ಚೀಣಾಕ್ಕೆ ಭಾರತದ ಮೇಲಿನ ಯುದ್ಧಕ್ಕೆ ಪೂರ್ವ ಬಂಗಾಳವನ್ನು ನಿಲ್ದಾಣ ಮಾಡಿಕೊಳ್ಳಲು ಅನುಕೂಲಿಸಲು ವಾಗ್ದಾನ ಮಾಡಿದ್ದರೆಂದೂ ಪ್ರತಿಫಲವಾಗಿ ಅವರಿಗೆ ಕಾಶ್ಮೀರವನ್ನು ಒತ್ತಾಯದಿಂದ ಪಡೆಯಲು ಚೀಣಾ ಮಿಲಿಟರಿ ಸಹಾಯ ಕೊಡುವ ಏರ್ಪಾಡಿರುವುದೂ ಪ್ರಕಟಿಸಿದೆ

✱

ಹಿಂದಿ

ನವದೆಹಲಿ— ಹಿಂದಿಯು 50 ವಿಶ್ವವಿದ್ಯಾಲಯಗಳಲ್ಲಿ ಕಲಿಸಲಾಗುತ್ತಿದೆಯೆಂದು ವಿದ್ಯಾಸಚಿವಾಲಯಕ್ಕೆ ತಿಳಿದುಬಂದಿರುವ ವಾರ್ತೆ.

●

ಉಚಿತ ಶಿಕ್ಷಣ

ಬೆಂಗಳೂರು— ರಾಜ್ಯದಲ್ಲಿ ಸೆಕೆಂಡರಿ ವಿದ್ಯಾಭ್ಯಾಸವನ್ನು ಉಚಿತವಾಗಿ ಮಾಡಲು ಸರ್ಕಾರ ನಿರ್ಧರಿಸಿದೆ ಎಂದು ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು

★

ಸಶಸ್ತ್ರ ಪಡೆಗಳಿಗೆ

ಚಿತ್ರದುರ್ಗ— ಜಿಲ್ಲಾ ಕಾಂಗ್ರೆಸು ಸಮಿತಿಯ ಸ್ತ್ರೀ ಶಾಖೆಯು ಸಶಸ್ತ್ರ ಪಡೆಗಳಿಗಾಗಿ ನೂರು ಪೌಂಡು ಹಿತ್ತಾಳೆ ತಾಂಬ್ರ ಪಾತ್ರೆಗಳು, ಟವಲು ಸಿಗರೇಟು ಹಣವನ್ನೂ ಶೇಖರಿಸಿದರು.

ಚಿರ ಯೌವನ

ಕಾರ್ಲ್ಸ್‌ರೂಹಿ (ಡಾಡ್) — ತಾನು ಯೌವನಕಾಲದಲ್ಲಿ ಅನುಭವಿಸಬೇಕಾದುದೆಲ್ಲವನ್ನೂ ಅನುಭವಿಸಿದ್ದರೂ ತೃಪ್ತನಾಗದ ಯಯಾತಿಯು ತನ್ನ ಮಕ್ಕಳನ್ನು ಕರೆದು ಯೌವನದ ಭಿಕ್ಷೆ ಕೇಳಿದ್ದು ಪಡೆದದ್ದು ಎಲ್ಲರಿಗೂ ತಿಳಿದದ್ದೇ ; ಈ ಕಾಲದಲ್ಲಿ ಅಂತಹ ಪವಾಡ ಸಾಧ್ಯವಿಲ್ಲೆಂತಲೇ ಜನರು ಔಷಧಿಗಳಿಗೆ ಕಾಯಕಲ್ಪ ಚಿಕಿತ್ಸೆಗಳಿಗೆ ಶರಣಾಗಿದ್ದಾರೆ : ಒಟ್ಟಿನಲ್ಲಿ ಎಂದೂ ಮನುಷ್ಯ ಮುಪ್ಪನ್ನು ದ್ವೇಷಿಸುತ್ತಲೇ ಬಂದಿದ್ದಾನೆ : ದ್ವೇಷಿಸುವುದೂ ಸಹಜವೇ ; ಕಣ್ಣು ಮಂಜಾಗಿ, ಹಲ್ಲುಗಳುದುರಿ, ಮುಖ ಸುಕ್ಕು ಬಿದ್ದು, ತಲೆ ನೆರೆತು .... ಅಯ್ಯೋ ಘೋರ ! ಇವೆಲ್ಲಾ ಯಾರಿಗೆ ಬೇಕು ?

ಹೀಗೆ ಚಿರ ಯೌವನ ಬಯಸುವವರಿಗೆ ಸಹಾಯ ಮಾಡಿ, ತಾವೂ ಚಿರಯೌವನ ಹೊಂದಿರಲು ಸಾಧ್ಯವೇ ಎಂದು ಈಚೆಗೆ ಕಾರ್ಲ್ಸ್‌ರೂಹಿಯಲ್ಲಿ ನಡೆದ ವೈದ್ಯಕೀಯ ಸಮ್ಮೇಳನದಲ್ಲಿ 6000 ವೈದ್ಯತಜ್ಞರು ಚರ್ಚಿಸಿದರು : ಇವರೆಲ್ಲಾ ಜರ್ಮನಿಯ ವಿವಿಧ ಭಾಗಗಳಿಂದ ಮಾತ್ರವಲ್ಲದೆ ಜಗತ್ತಿನ ನಾನಾಭಾಗಗಳಿಂದ ಬಂದಿದ್ದರು : ವೃದ್ಧರ ಆರೋಗ್ಯ ರಕ್ಷಣೆ ಕ್ರಮೇಣ ಅವರ ಶಕ್ತಿ ಕುಂದುತ್ತಾ ಬರುವಿಕೆ, ಮುಂತಾದುವನ್ನೆಲ್ಲಾ ಇಲ್ಲಿ ಪರ್ಯಾಲೋಚಿಸಲಾಯಿತು.

(ಯು ಪಿ ಎಸ್)

—o—

ತುಳು ಗಾದೆಗಳು

ಕೆಳಗಿಟ್ಟರೆ ಇರುವೆ ಕೊಂಡೊಯ್ದೀತು, ಮೇಲಿಟ್ಟರೆ ಗಿಡುಗ ಒಯ್ದೀತು
ಗರ್ವ ಸರ್ವವನ್ನೂ ಒಯ್ದೀತು
ಊರವರ ಬಿಟ್ಟಿ ಚಾಕರಿ ಮಾಡಿ ತನ್ನ ಹೊಲ ಪಾಳು ಬಿತ್ತು
ತಾನು ನೆಟ್ಟ ಸಸಿ ಈಗ ಎರಡು ಕೈಯಿಂದ ಎಳೆದರೂ ಬರುವುದಿಲ್ಲ.
ಬಸಿರಲ್ಲಿದ್ದಾಗ ಉಣ್ಣು, ಹೆತ್ತಾಗ ಕಾದು ತಿನ್ನು
ಆರು ಹೆತ್ತವಳಿಗೆ ಮೂರು ಹೆತ್ತವಳು ಕಲಿಸಿದಳಂತೆ
ಕೋಪ ಬಂದಾಗ ಏನೂ ಸಿಕ್ಕದಿದ್ದರೆ ಬೆಕ್ಕು ಗೋಡೆ ಪರಚುವುದಂತೆ,
ಇರುವೆ ಕೊಲ್ಲಲು ಲಕ್ಷ್ಮೀಚೇಳು ಬೇಕೆ ?
ತಾಯಿ ತನ್ನ ಮಕ್ಕಳನ್ನು ಹೊಗಳಿದ ಹಾಗೆ.

— ಗೋರಕ್ಷಣ ವ್ಯವಸ್ಥಾಪಕರ ವಿನಂತಿ —

ಚಂದಾ ವಾಯಿದೆ ಮುಗಿದಿರುವವರು ಚಂದಾ ಪಾವತಿ ಮಾಡಬೇಕಾಗಿ ವಿನಂತಿ–
ಡಾ|| ಪಿ ಎಸ್ ನಾರಾಯಣ್ | ಶ್ರೀ ಪಿ ಎಸ್ ವಿಶ್ವನಾಥ, ಜಯನಗರ, ಬೆಂಗಳೂರು
ಶ್ರೀ ಬಿ ಜಿ ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು
ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ, ಹೊಂಗನೂರು
ಗೋರಕ್ಷಣ ಆಫೀಸು, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು 4

Help The Gorakshana

★

ಗೋರಕ್ಷಣಕ್ಕೆ ಬೆಂಬಲ ನೀಡಿ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು
ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ ಪ್ರಾಣದಯೆ, ಶಾಖಾಹಾರ, ಪಶುವೈದ್ಯ ವಿಚಾರ
ಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ ; ವಾರ್ಷಿಕ ಚಂದ 50 ಪೈಸೆ

ಸಹಾಯಕರು ರೂ 10 ಪ್ರೋತ್ಸಾಹಕರು ರೂ 25 : (ಒಂದು ಸಾರಿ ಮಾತ್ರ)

ಗೋರಕ್ಷಣಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕ
ವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

ವುಡ್‌ಲ್ಯಾಂಡ್ಸ್ **21–10–65 ರಿಂದ**
ಅಮೋಘ ಆರಂಭ

ಚಿತ್ರಾಕರ್ಷಕ ಹಿಂದಿ ಚಿತ್ರ ಪ್ರತಿ ದಿನ 3 ಪ್ರದರ್ಶನಗಳು

ಜಿಂದಗಿ ಔರ್ ಮೌತ್
Zindagi aur Mauth

ತಾರಾಗಣ— ಪ್ರದೀಪಕುಮಾರ್, ಫರ್ಯಾಲ್, ನಿಲೋಫರ್, ಜಾನಿವಾಕರ್

ಅಪೆರಾ— **15–10–65 ರಿಂದ**

ಕಲ್ಯಾಣ ಮಂಟಪಂ (ತಮಿಳು)

ನಟವರ್ಗ— ಆನಂದನ್, ಕೆ ಆರ್ ವಿಜಯಾ, ಮನೋಹರ್, ಮಾಲತಿ
ತಾಯ್ ನಾಗೇಶ್, ಮನೋರಮ [ದಿನ 3 ಆಟಗಳು]

SHAKTI
SUDHA

A Superb Tonic

Quality Printing — Neat Binding
Lakshminarasimha Press
Sivarampet, Mysore

ಅಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ
ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Protect the Cow

ಗೋಸಂರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳೂ ಹೆಚ್ಚುಹೆಚ್ಚಾಗಿ ನಡೆಯಲಿ

Edited, Printed & Published by Dharma pracharaka
M S Krishna Rao (Proprietor) at the Satyavadi Press
Chamarajapuram, Mysore 4